ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 27–11–2014

## ಪತ್ರಿಕಾ ಪ್ರಕಟಣೆ

## ಜೆಎನ್‌ಯು ನಲ್ಲಿ ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆ: ವಿವಿ ಕುಲಪತಿ ಜೊತೆ ಸಚಿವೆ ಉಮಾಶ್ರೀ ಚರ್ಚೆ

ಇಂದು ದಿ:27.11.2014ರಂದು ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಸುಧೀರ್ ಸಪೋರಿ ಹಾಗೂ ಡಾ: ಸುಧಾ ಪೈ ನಿದೇಸಕರು ಭಾರತೀಯ ಭಾಷೆಗಳ ಕೇಂದ್ರ ಇವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆಯಾದ ಶ್ರೀಮತಿ ಉಮಾಶ್ರೀರವರು ಭೇಟಿ ಮಾಡಿ ಅಲ್ಲಿ ಕನ್ನಡ ಅದ್ಯಯನ ಪೀಠವನ್ನು ಸ್ಥಾಪನೆ ಸಂಭಂದ ಚರ್ಚೆ ನಡೆಸಿದರು.

ಈ ಕನ್ನಡ ಅಧ್ಯಯನ ಪೀಠಕ್ಕೆ ಸರ್ಕಾರ ಈಗಾಗಲೇ ಹಣ ಬಿಡುಗಡೆ ಮಾಡಿದ್ದು, ಬೋಧಕ ಮತ್ತು ನಿರ್ದೇಶಕರ ಆಯ್ಕೆ ಪ್ರಕ್ರಿಯೆಗೆ ಚಾಲನೆ ನೀಡುವಂತೆ ಕೋರಿದರು. ಇದಕ್ಕೆ ಪ್ರತಿಕ್ರಯಿಸಿದ ಕುಲಪತಿಗಳು ಈಗಾಗಲೇ ಒಂದು ಆಂತರಿಕ ಸಮಿತಿ ರಚಿಸಲಾಗಿದೆ ಇದು ಕೊಡುವ ವರದಿಯನ್ನು ಆಧರಿಸಿ ಮತ್ತೊಂದು ಮುಖ್ಯ ಸಮಿತಿಯನ್ನು ರಚಿಸಲಾಗುತ್ತದೆ. ನಿರ್ದೇಶಕರ ಆಯ್ಕೆಗೆ ಈಗಾಗಲೇ ಹಲವಾರು ಹೆಸರುಗಳನ್ನು ಪರಿಶೀಲಿಸಲಾಗಿದೆ ತಜ್ಞರ ಸಮಿತಿ ಅಂತಿಮ ನಿರ್ಧಾರ ಕೈಗೊಳ್ಳುತ್ತದೆ ಎಂದು ಕುಲಪತಿಗಳು ತಿಳಿಸಿದರು. ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾಗಲಿರುವ ಕನ್ನಡ ಭಾಷೆಯ ಅಧ್ಯಯನದ ಜೊತೆ ಕನ್ನಡ ಪೀಠವು ಕರ್ನಾಟಕದ ಕಲೆ, ಇತಿಹಾಸ ವಾಸ್ತುಶಿಲ್ಪ ಐತಿಹಾಸಿಕ ಸ್ಮಾರಕಗಳ ವೈಶಿಶ್ಟಗಳನ್ನು ಇಡೀ ಜಗತ್ತಿಗೆ ಅನಾವರಣಗೊಳಿಸುವ ಕೆಲಸವನ್ನು ಮಾಡಬೇಕು. ಡಾ: ಕೆ.ಕಸ್ತೂರಿ ರಂಗನ್ ಅವರು ಈ ವಿಶ್ವವಿದ್ಯಾಲಯದ ಚಾನ್ಸಲರ್ ಕೂಡ ಆಗಿದ್ದು ಈ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದಾರೆ ಎಂದು ಸಚಿವೆ ಶ್ರೀಮತಿ ಉಮಾಶ್ರೀ ಹೇಳಿದರು. ಈ ಸಂಧರ್ಭದಲ್ಲಿ ಕನ್ನಡ

ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಡಾ: ಶಾಲಿನಿ ರಜನೀಶ್ ಅವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

Photo caption:

Karnataka Minister for Kannada,Culture, Woman and Child Development,Mrs Umashree met Vice Chancellor,Jawaharlal Nehru University,Prof Sudhir K Sopory
(Photos;DSCC_0497 AND DSC_0509) in New Delhi on November-27 and discussed about the establishment of Kannada Chair (Kannada Adyayana Peetha) in the University.JNU Rector, Prof Sudha Pai, Principal Secretary, to GOK,Deprtment of Kannada And Culture, Dr Shalini Rajanish, Noted Litterateur,Prof H S Shiva Prakash and others are also seen in the Picture (Photo; DSC_0511

## ಬೆಂಗಳೂರಿನಲ್ಲಿ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರ ಸ್ಥಾಪನೆಗೆ ನೆರವು : ಕೇಂದ್ರ ಸಚಿವೆ ಸ್ಮೃತಿ ಇರಾನಿ ಭರವಸೆ

ನವದೆಹಲಿ–ನವೆಂಬರ್–27, ಬೆಂಗಳೂರಿನಲ್ಲಿ ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರದ ಸ್ಥಾಪನೆಗೆ ಎಲ್ಲಾ ರೀತಿಯ ಅಗತ್ಯ ನೆರವನ್ನು ಒದಗಿಸಲಾಗುವುದು ಎಂದು ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಸ್ಮೃತಿ ಇರಾನಿ ಹೇಳಿದ್ದಾರೆ.

ಇಂದು ಈ ಸಂಬಂಧ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಉಮಾಶ್ರೀ ಅವರು ನವದೆಹಲಿಯಲ್ಲಿನ ಅವರ ಕಛೇರಿಯಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸುವ ಸಂದರ್ಭದಲ್ಲಿ ಈ ಭರವಸೆ ನೀಡಿದರು.

ಬಹಳ ದಿನಗಳಿಂದ ನನೆಗುದಿಗೆ ಬಿದ್ದಿದ್ದ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರ ಪೂರ್ಣ ಪ್ರಮಾಣದಲ್ಲಿ ಕಾರ್ಯರಂಭ ಮಾಡಬೇಕಾದರೆ ಕೇಂದ್ರ ಸರ್ಕಾರ ಅಗತ್ಯವಾದ ಹಣಕಾಸು ನೆರವು ಹಾಗೂ ಮಂಡಳಿ ರಚನೆಯಲ್ಲಿ ತನ್ನ ಸಹಕಾರ ಮಾರ್ಗದರ್ಶನ ಅಗತ್ಯವಿದೆ ಎಂದು ಸಚಿವೆ ಉಮಾಶ್ರೀ ಕೇಂದ್ರ ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

ಇದಕ್ಕೆ ಸ್ಪಂದಿಸಿದ ಸ್ಮೃತಿ ಇರಾನಿ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಮುಂದಿನ ಗುರುವಾರ ಇದಕ್ಕೆ ಸಂಬಂಧಿಸಿದ ಸಭೆ ಕರೆಯಲು ಆದೇಶಿಸಿದರು. ಕನ್ನಡಿಗರು ಇದಕ್ಕಾಗಿ ಇನ್ನೂ ಬಹಳ ದಿನ ಕಾಯಬೇಕಾಗಿಲ್ಲ ಎಂದು ಹೇಳಿದರು.

ಇದಕ್ಕೆ ಮುಂಚೆ ಕೇಂದ್ರ ಸರ್ಕಾರದ ರಸಗೊಬ್ಬರ ಹಾಗೂ ಕೀಟನಾಶಕ ಇಲಾಖೆ ಸಚಿವರಾದ ಶ್ರೀ ಅನಂತ ಕುಮಾರ್ ಅವರನ್ನು ಭೇಟಿ ಮಾಡಿದ ಸಚಿವೆ ಉಮಾಶ್ರೀ ಅವರನ್ನೂ ಸಹ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದ ಸ್ಥಾಪನೆಗೆ ಸಹಕಾರ ನೀಡಬೇಕು ಎಂದು ಮನವಿ ಸಲ್ಲಿಸಿದರು. ಅನಂತ ಕುಮಾರ್ ಅವರು ಕೂಡಲೇ ಸ್ಮೃತಿ ಇರಾನಿ ಅವರಿಗೆ ದೂರವಾಣಿ ಕರೆ ಮಾಡಿ, ಕೂಡಲೇ ರಾಜ್ಯ ಸರ್ಕಾರದ ಮನವಿಯ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ನವದೆಹಲಿಯ ಸ್ಥಾನಿಕ ಆಯುಕ್ತರಾದ ಶ್ರೀಮತಿ ವಂದನಾ ಗುರುನಾನಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ:ಶಾಲಿನಿ ರಜನೀಶ್ ಅವರು ಕೂಡ ಹಾಜರಿದ್ದರು.

Photo caption:
Karnataka Minister for Kannada,Culture,Women and Child Development,Mrs Umashree called on the Union Minister For Human Resources Development,Mrs Smriti Zubin Irani,in New Delhi on November-27,and appealed the Union Minister to "Expedite the Process of Transferring the Centre of Excellence for Studies in Classical Kannada (CESCK),Central Institute of Indian Langauge (CIIL) from Mysore to Bangalore.This will felicitate the State Government to carry on the works in Classical Kannada Langauge, speedily"

Principal Secretary,Department of Kannada and Culture,Dr Shalini Rajanish and Resident Commissioner, Karnataka Bhavan Mrs Vandana Gurnani were also present.

* * *

Karnataka Minister for Kannada,Culture,Woman and Child Development,Mrs Umashree called on the Union Minister for Chemical And Fertilizer,Mr Ananth Kumar (Photo; DSC_0522) in New Delhi on November-27,and sought his support,pending issues relating to Classical Status for Kannada Langauge. Principal Secretary,Department of Kannada and Culture,Dr Shalini Rajanish and Resident Commissioner, Karnataka Bhavan Mrs Vandana Gurnani are also seen in the picture (Photo; DSC_0525)

# ಫಲಾನುಭವಿಗಳ ಸಾಲದ ಮೊತ್ತ ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾವಣೆಗೆ ಕ್ರಮ

**– ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷ ಶ್ರೀ ರಾಮಚಂದ್ರಪ್ಪ**

ಬೆಂಗಳೂರು, ನ. 27 (ಕರ್ನಾಟಕ ವಾರ್ತೆ)–

ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ ಯೋಜನೆಗೆ ಸಾಲ ಪಡೆಯುವ ಫಲಾನುಭವಿಗಳಿಗೆ ಸಾಲದ ಮೊತ್ತವನ್ನು ಫಲಾನುಭವಿಗಳ ಖಾತೆಗೆ ನೇರ ವರ್ಗಾವಣೆ ವ್ಯವಸ್ಥೆಯಲ್ಲಿ ಒದಗಿಸಲು ಕ್ರಮ ವಹಿಸಲಾಗುವುದು ಎಂದು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷ ಶ್ರೀ ಎಂ. ರಾಮಚಂದ್ರಪ್ಪ ಅವರು ತಿಳಿಸಿದರು.

ನಿಗಮದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಮಾಧ್ಯಮದವರೊಡನೆ ಮಾತನಾಡುತ್ತಿದ್ದ ಅವರು ಸಾಲ ಮರುಪಾವತಿಗೂ ಆನ್‌ಲೈನ್ ಪದ್ಧತಿ ಅಳವಡಿಸಲು ಯೋಜಿಸಲಾಗುವುದು ಎಂದು ತಿಳಿಸಿದರು.

ಹಳ್ಳಿಗಳಿಂದ ನಗರಕ್ಕೆ ವಲಸೆ ಬರುವುದನ್ನು ತಡೆಗಟ್ಟಲು ಸ್ತ್ರೀಶಕ್ತಿ ಸಂಘಗಳ ಮಾದರಿಯ ಯೋಜನೆಯಲ್ಲಿ ಯುವ ಶಕ್ತಿ ಸಂಘಗಳನ್ನು ಸ್ಥಾಪಿಸಲು ಚಿಂತನೆ ನಡೆಸಲಾಗುತ್ತಿದೆ ಎಂದು ಹೇಳಿದ ಶ್ರೀ ರಾಮಚಂದ್ರಪ್ಪ ಅವರು ಹಿಂದುಳಿದ ವರ್ಗಗಳ ಜನರ ಸಮಸ್ಯೆಗಳನ್ನು ಅರಿಯಲು ರಾಜ್ಯಾದ್ಯಂತ ಪ್ರವಾಸ ನಡೆಸುವುದಾಗಿ ನುಡಿದರು. ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದ ಕೊಳವೆ ಬಾವಿಗಳು ಬತ್ತಿ

ಹೋಗಿದ್ದಲ್ಲಿ ಅವುಗಳ ಪುನಶ್ಚೇತನಕ್ಕೆ ಅವಕಾಶ ಕಲ್ಪಿಸಲು ನಿಗಮ ಸದ್ಯದಲ್ಲೇ ಯೋಜನೆ ರೂಪಿಸಲಿದೆ ಎಂದು ತಿಳಿಸಿದರು.

ರಾಜ್ಯದಲ್ಲಿರುವ ಶೇ. 60 ರಷ್ಟು ಜನಸಂಖ್ಯೆ ಹೊಂದಿರುವ ಹಿಂದುಳಿದ ವರ್ಗಗಳ ಅಭ್ಯುದಯಕ್ಕಾಗಿ ಪ್ರಸ್ತುತ 35,800 ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. ಈ ಸಂಖ್ಯೆಯನ್ನು ಹೆಚ್ಚಿಸಿ ಹಿಂದುಳಿದ ವರ್ಗಗಳ ಅಭ್ಯುದಯಕ್ಕಾಗಿ ಶ್ರಮಿಸುವುದಾಗಿ ಶ್ರೀ ರಾಮಚಂದ್ರಪ್ಪ ಅವರು ತಿಳಿಸಿದರು. ಇದೇ ಸಂದರ್ಭದಲ್ಲಿ ನಿಗಮ ವ್ಯವಸ್ಥಾಪಕ ನಿರ್ದೇಶಕ ಶ್ರೀ ಚಂದ್ರಶೇಖರ್ ಅವರು ಹಾಜರಿದ್ದರು.

## ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾಗಿ ಶ್ರೀ ಎಂ.ಆರ್. ರಂಗಶಾಮಯ್ಯ ಅಧಿಕಾರ ಸ್ವೀಕಾರ

ಬೆಂಗಳೂರು, ನ. 27 (ಕರ್ನಾಟಕ ವಾರ್ತೆ)–

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾಗಿ ನಿಯೋಜಿತರಾಗಿರುವ ಶ್ರೀ ಎಂ. ಆರ್. ರಂಗಶಾಮಯ್ಯ ಮಂಚಲ ದೋರೆ, ಹಾಗಲ್ವಾಡಿ ಹೋಬಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಇಂದು ಪೂರ್ವಾಹ್ನ ಅಧಿಕಾರ ಸ್ವೀಕರಿಸಿದರು. (ಚಿತ್ರ ಲಗತ್ತಿಸಿದೆ.)

## ಜಾನಪದ ಅಕಾಡೆಮಿಯ 2011 ಮತ್ತು 2012 ನೇ ಸಾಲಿನ ಪುಸ್ತಕ ಬಹುಮಾನ ಪ್ರಕಟ

**ಬೆಂಗಳೂರು, 27 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಜಾನಪದ ಅಕಾಡೆಮಿಯ 2011 ಮತ್ತು 2012 ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಜಾನಪದ ಕೃತಿಗಳು ಆಯ್ಕೆಯಾಗಿದ್ದು, ಪ್ರಶಸ್ತಿ ಮೊತ್ತ ರೂ 5,000/–, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ಬಹುಮಾನಕ್ಕೆ ಆಯ್ಕೆಯಾದ ಪುಸ್ತಕಗಳ ವಿವರ ಇಂತಿದೆ.

2011 ನೇ ಸಾಲಿನ ಪುಸ್ತಕ ಬಹುಮಾನದಡಿ ಜಾನಪದ ಪದ್ಯ ಪ್ರಕಾರದಲ್ಲಿ ಡಾ. ಕೆ.ವಿ. ಮುದ್ದವೀರಪ್ಪ ಅವರ ವೀರಬೊಮ್ಮನಹಳ್ಳಿ ದಿಬ್ಬರ ವೀರಬೊಮ್ಮನ ಕಾವ್ಯ. ಜಾನಪದ ಗದ್ಯ ಪ್ರಕಾರದಲ್ಲಿ ಡಾ. ಭತಮುರ್ಗೆಚಂದ್ರಪ್ಪ ಅವರ ನನ್ನೂರ ನನ್ನವ್ವ, ಜಾನಪದ ವಿಚಾರ, ವಿಮರ್ಶೆ, ಸಂಶೋಧನೆಯಲ್ಲಿ ಡಾ ಸಿ.ಕೆ. ನಾವಲಗಿ ಅವರ ಜಾನಪದ ಸಡಗರ ಹಾಗೂ ಪ್ರೊ. ಎ.ವಿ. ನಾವಡ ಅವರ ಜಾನಪದ ಸ್ವರೂಪ ಮತ್ತು ವ್ಯಾಖ್ಯೆ - ಈ ಎರಡೂ ಕೃತಿಗಳಿಗೂ ಬಹುಮಾನವನ್ನು ಸಮಾನವಾಗಿ ಹಂಚಲಾಗುವುದು, ಜಾನಪದ ಸಂಕೀರ್ಣ ಪ್ರಕಾರದಲ್ಲಿ ಡಾ ಸಿದ್ದಣ್ಣ ಎಫ್. ಜಕಬಾಳ ಅವರ ಅರ್ತಾ ಹೇಳ್ತಿನಂತಾಳ ಕೃತಿಗೆ ಬಹುಮಾನ ದೊರಕಿದೆ.

2012 ನೇ ಸಾಲಿನ ಪುಸ್ತಕ ಬಹುಮಾನದಡಿ ಜಾನಪದ ಪದ್ಯ ಪ್ರಕಾರದಲ್ಲಿ ಡಾ. ಸಿ.ಕೆ. ನಾವಲಗಿ ಅವರ ಶತಮಾನ ಕಂಡ ಸೋಮಲಿಂಗ ಕವಿಯ ಲಾವಣಿಗಳು, ಜಾನಪದ ಗದ್ಯ ಪ್ರಕಾರದಲ್ಲಿ ಡಾ. ಮೈಲಹಳ್ಳಿ ರೇವಣ್ಣ ಅವರ ಜಾನಪದ ಗಾಥೆ ಮತ್ತು ಒಗಟುಗಳು ಜಾನಪದ ವಿಚಾರ, ವಿಮರ್ಶೆ, ಸಂಶೋಧನೆಯಲ್ಲಿ ಡಾ. ಎನ್.ಆರ್. ನಾಯಕ ಅವರ ಹಾಲಕ್ಕಿ ಒಕ್ಕಲಿಗರು ಒಂದು ಸಾಂಸ್ಕೃತಿಕ ಅಧ್ಯಯನ ಮತ್ತು ಜಾನಪದ ಸಂಕೀರ್ಣ ಪ್ರಕಾರದಲ್ಲಿ ಶ್ರೀ ಜೀನಹಳ್ಳಿ ಸಿದ್ದಲಿಂಗಪ್ಪ ಅವರ ಗ್ರಾಮೀಣ ಗಣಿತ ಮತ್ತು ಭಾಷಾ ಚಮತ್ಕಾರಕ್ಕೆ ಬಹುಮಾನಗಳನ್ನು ನೀಡಲಾಗಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ಬಿ.ಎನ್. ಪರಡ್ಡಿ ತಿಳಿಸಿದ್ದಾರೆ.

ಬಾಬು:ಜಿಪಿಆರ್

## ONE DAY WORKSHOP ON ROOF TOP SOLAR PHOTOVOLTAIC POWER SYSTEMS AND NET ENERGY METERING ON NOVEMEBER 29 IN CITY

BENGALURU, NOVEMBER 27 (KARNATAKA INFORMATION ):

Mahatma Gandhi Institute of Rural energy and Development is organizing a one day workshop on **Roof Top Solar Photovoltaic Power System** and Net Energy Metering in association with the Department of Energy at its campus in Jakkur on November 29.

The motto of the workshop is to create awareness and educate the people, who are desirous of installing roof top SPV's so that they are provided all the required information right from procedures, technology, subsidies, types of equipment and materials available in the market with the sole objective of convincing the participants to go ahead and install the systems.

Solar PV rooftop installers will display their products and customers can have direct interaction with them. All those who are interested in installing roof top SPV system and interested in participating in the workshop are welcome and are required to register with MGIRED. Since there is scope for limited participation, **only the 80 persons will be registered on first come first serve basis and will be given an opportunity to participate in the workshop.**

Interested persons may visit MGIRED website: www.mgired.kar.nic.in, or contact email: mgrired@gmail.com or Prof R.S.Verma on his Mobile : 99001 54715 or Mr Pramod, Project Manager on his Mobile: 96205 41453 email: mgrired@gmail.com for further details.

## ನವೆಂಬರ್ 29 ರಂದು ನಗರದಲ್ಲಿ ಮೇಲ್ಛಾವಣಿ "ಸೌರಶಕ್ತಿ ಪಿ.ವಿ. ವಿದ್ಯುತ್ ಘಟಕಗಳು ಮತ್ತು ನೆಟ್ ಮೀಟರಿಂಗ್ ವ್ಯವಸ್ಥೆ" ಕುರಿತ ಒಂದು ದಿನದ ಕಾರ್ಯಾಗಾರ

ಬೆಂಗಳೂರು, ನವೆಂಬರ್ 27 (ಕರ್ನಾಟಕ ವಾರ್ತೆ) :

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಇಂಧನ ಇಲಾಖೆಯ ಸಹಯೋಗದೊಂದಿಗೆ ಮೇಲ್ಛಾವಣಿ "ಸೌರಶಕ್ತಿ ಪಿ.ವಿ. ವಿದ್ಯುತ್ ಘಟಕಗಳು ಮತ್ತು ನೆಟ್ ಮೀಟರಿಂಗ್ ವ್ಯವಸ್ಥೆ" ಕುರಿತ ಒಂದು ದಿನದ ಕಾರ್ಯಾಗಾರವನ್ನು ಜಕ್ಕೂರಿನಲ್ಲಿರುವ ಸಂಸ್ಥೆಯ ಆವರಣದಲ್ಲಿ ನವೆಂಬರ್ 29 ರಂದು ಆಯೋಜಿಸಿದೆ.

ಮೇಲ್ಛಾವಣಿ ಪಿ.ವಿ. ವಿದ್ಯುತ್ ಘಟಕಗಳನ್ನು ಅಳವಡಿಸಲು ಬೇಕಾಗಿರುವ ವಿಧಾನಗಳು, ತಂತ್ರಜ್ಞಾನಗಳು, ಸಹಾಯಧನ, ಮಾರುಕಟ್ಟೆಯಲ್ಲಿ ಲಭ್ಯವಿರುವ ಸಲಕರಣೆಗಳು, ಸಾಲ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವುದೇ ಈ ಕಾರ್ಯಾಗಾರದ ಉದ್ದೇಶವಾಗಿದೆ.

ತಜ್ಞರು ಹಾಗೂ ಘಟಕಗಳನ್ನು ಅಳವಡಿಸುವವರು ತಮ್ಮ ಉತ್ಪನ್ನಗಳೊಂದಿಗೆ ಈ ಸಂದರ್ಭದಲ್ಲಿ ಹಾಜರಿರುತ್ತಾರೆ. ಶಿಬಿರಾರ್ಥಿಗಳು ನೇರವಾಗಿ ಅವರಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ. ಮೇಲ್ಛಾವಣಿ ಪಿ.ವಿ. ಘಟಕಗಳನ್ನು ಅಳವಡಿಸಲು ಉತ್ಸುಕರಾಗಿರುವವರು ಈ ಕಾರ್ಯಾಗಾರದಲ್ಲಿ ಭಾಗವಹಿಸಲು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕಾಗಿದೆ. ಸೀಮಿತ ನೋಂದಣಿಗೆ ಅವಕಾಶವಿರುವುದರಿಂದ, ಮೊದಲು ಬಂದವರಿಗೆ ಆದ್ಯತೆಯ ಮೇರೆಗೆ ಕೇವಲ 80 ಜನರ ನೋಂದಣಿಗೆ ಮಾತ್ರ ಅವಕಾಶವಿದೆ.

ಹೆಚ್ಚಿನ ವಿವರಗಳಿಗೆ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ವೆಬ್‌ಸೈಟ್ : www.mgired.kar.nic.in ಅಥವಾ ಇ-ಮೇಲ್ :mgrired@gmail.com ಸಂದರ್ಶಿಸಬಹುದು. ಇಲ್ಲವಾದಲ್ಲಿ ಪ್ರೊ. ಆರ್.ಎಸ್. ವರ್ಮಾ, ಹಿರಿಯ ಪ್ರಬಂಧಕರು ಮೊಬೈಲ್ ಸಂಖ್ಯೆ.99001 54715 ಅಥವಾ ಶ್ರೀ ಪ್ರಮೋದ್, ಯೋಜನಾ ವ್ಯವಸ್ಥಾಪಕರು, ಮೊಬೈಲ್ ಸಂಖ್ಯೆ 96205 41453 ಇವರನ್ನು ಸಂಪರ್ಕಿಸಬಹುದು.